ರಾಜ್ಯದಲ್ಲಿರುವ ಎಂ.ಎಸ್.ಐ.ಎಲ್. ಅಂಗಡಿ

1341(1422); ಶ್ರೀ ಚಿಕ್ಕಮಾದು ಎಸ್.

ಅ) ರಾಜ್ಯದಲ್ಲಿರುವ ಎಂಎಸ್ಐಎಲ್ ಅಂಗಡಿಗಳ ಸಂಖ್ಯೆ ಎಷ್ಟು;

ಆ) ಈ ಎಂ.ಎಸ್.ಐ.ಎಲ್. ಅಂಗಡಿಗಳಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ಆದಾಯ ಮತ್ತು ಖರ್ಚು ಎಷ್ಟು?

ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕೊಹೋಳಿ (ಅಬಕಾರಿ ಸಚಿವರು)

ಅ) ರಾಜ್ಯದಲ್ಲಿ 401 ಎಂಎಸ್ಐಎಲ್ (ಸಿಎಲ್–11ಸಿ) ಮದ್ಯದಂಗಡಿಗಳಿವೆ.

ಆ) ಎಂಎಸ್ಐಎಲ್ ಸಂಸ್ಥೆಯ ಮದ್ಯ ವ್ಯವಹಾರದಿಂದ ವಾರ್ಷಿಕ ಆದಾಯ ಮತ್ತು ಖರ್ಚು ಕೆಳಕಂಡಂತಿರುತ್ತದೆ.

(ಲಕ್ಷ ರೂ.ಗಳಲ್ಲಿ)

ವಾರ್ಷಿಕ ಆದಾಯ	7742.06
ವಾರ್ಷಿಕ ಖರ್ಚು	4970.88

ವಿದ್ಯಾರ್ಥಿಗಳಿಗೆ ಸರ್ಕಾರಿ ಸವಲತ್ತುಗಳು

1342(1423); ಶ್ರೀ ಚಿಕ್ಕಮಾದು ಎಸ್. (ಹೆಚ್.ಡಿ. ಕೋಟೆ)

ಅ) ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಒದಗಿಸುತ್ತಿರುವ ಸವಲತ್ತುಗಳೇನು (ಮಾಹಿತಿ ಒದಗಿಸುವುದು);

ಆ) ಅನುದಾನಕ್ಕೆ ಒಳಪಟ್ಟ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಒದಗಿಸುತ್ತಿರುವ ಸವಲತ್ತುಗಳು ಯಾವುವು (ಮಾಹಿತಿ ನೀಡುವುದು);